ಇರುವ ವ್ಯತ್ಯಾಸವೇ ತಿಳಿದಿರುತ್ತಿರಲಿಲ್ಲ. ಅವಳಿಗೆ ಈ ಫ್ಯಾಷನ್ ಬೃಹತ್ ಅಲೆಯಿಂದ ಕೈತುಂಬಾ ಹಣ ಸಿಗುತ್ತಿತ್ತು.

ಆ ದಿನ ದೇವಸ್ಥಾನದಲ್ಲಿ ಜನರಲ್ ಬಾಡಿ ಮೀಟಿಂಗ್ ನಡೆಯಿತು. ಅಲ್ಲಲ್ಲೇ ಕೆಲಸದಲ್ಲಿ ತೊಡಗಿದ್ದ ಗಂಗೆಗೆ, ಮೀಟಿಂಗ್‌ನ ಕಾರ್ಯಕಾರಿ ಸಮಿತಿಗೆ ಹೊಸ ಸದಸ್ಯರನ್ನು ಸೇರಿಸಿಕೊಳ್ಳುವ ವಿಚಾರ ಕೇಳಿಬಂದಿತು. ದೇವಸ್ಥಾನಕ್ಕೆ ಹೆಚ್ಚಾಗಿ ಬರುವವರ ಹಲವರಲ್ಲಿ ಅವಳು ಗುರುತು ತಿಳಿದಂತಿತ್ತು. ಕುತೂಹಲದಿಂದ ಆ ಹೆಸರುಗಳು ಬಂದಾಗ ಸುಮ್ಮನೇ ಕಿವಿಗಿಳಿಸಿಕೊಂಡು ತನ್ನ ಪಾಡಿಗೆ ತಾನು ತನ್ನ ಕೆಲಸ ಮುಂದುವರಿಸಿಕೊಳ್ಳುತ್ತಿತ್ತು. 'ಶಿವಣ್ಣ' ಎಂಬ ಹೊಸ ಸದಸ್ಯನ ಹೆಸರನ್ನು ಕೇಳಿದ ಕೂಡಲೇ ಅವಳಿಗೆ ಮೈನಡುಕವಾಯಿತು. ವಿಚಿತ್ರವೆಂದರೆ ಅವನ ಹೆಸರನ್ನು ಶಿಫಾರಿಸ್ಸು ಮಾಡಿದ್ದು ಪ್ರಸಾದ...! ಆ ವಿಷಯ ಮಂಡನೆ ಮುಗಿದ ಮೇಲೆ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದವರ ಮೇಲೆ ದೂರಿನ ಪಟ್ಟಿಯಾಯಿತು. ಗಂಗೆ ಹೆಸರಿಗೂ ದೂರು ಬಂದಿತು.

'ಆ ಗಂಗ ಈಚೀಚೆಗೆ ಸರ್‍ಯಾಗಿ ಕೆಲ್ಸಕ್ಕೆ ಬರ್‍ತಿಲ್ಲ. ಬಂದ್ರೂ ಹಿಂದಿನ ಹಾಗೆ ಮೈ ಬಗ್ಗಿ ಕೆಲ್ಸ ಮಾಡೊಲ್ಲ. ಜೊತೆಗೆ ಆ ಮಗೂನೂ ಕಟ್ಕೊಂಡ್ ಬಂದ್ಬಿಡ್ತಾಳೆ... ಅದೊ ಒಂದು ಕ್ಷಣ ಒಂದ್ಕಡೆ ಕೂತ್ಕೋಳಲ್ಲ.... ಜೊತೆಗೆ ಸಿಂಬ್ಳ, ಉಚ್ಚೆನಾತ...'

'ಹೌದು... ಆ ಗಂಗಾನ ತೆಗೆದು ಯಾರ್‍ನಾರಾ ಬೇರೆವ್ರನ್ನ ಇಟ್ಕೋಬೇಕು. ಅವ್ಳಿಗೆ ಕರುಣೆ ತೋರ್‍ಸಿದ್ದು ಸಾಕು... ಅವ್ಳೇನು ಕುಂಟಿನೇ ಕುರುಡೀನೆ... ಅನಾಥೆ ಆದ್ರೆ ನಮಗೇನು...? ಎಲ್ಲಾದ್ರೂ ಅನಾಥಾಶ್ರಮಕ್ಕೆ ಹೋಗಿ ಸೇರ್‍ಕೊಳ್ಳಿ...'

ಮತ್ಯಾರೊ ಹಾಸ್ಯವಾಗಿ ನಕ್ಕರು. 'ಇವ್ಳು ಗತಿ ಇಲ್ಲದ ಮುದುಕಿ ಏನಲ್ಲವಲ್ಲಾ...! ಈ ತ್ರಿಪುರ ಸುಂದ್ರೀನ ಯಾವ ಅನಾಥಾಲಯ ಸೇರಿಸ್ಕೊಳತ್ತೆ...!'

'ಅದು ನಿಜ... ಹೋಗ್ಲಿ, ಆ ಮಗೂನ ಕೆಲ್ಸದ ವೇಳೆಯಲ್ಲಿ ಕರಕೊಂಡು ಬರ್‍ದಿದ್ರೂ ಆಗ್ತಿತು.... ಅದೊ ತನ್ನ ಸಡಗರದಲ್ಲಿ ಮಡಿ, ಮೈಲಿಗೆ ಒಂದಾಗಿ ಬಿಡ್ತತ್ತೆ.... ಒಳ್ಳೆ ಚುರ್ಕು ಮೆಣಸಿನಕಾಯಿ ಅದು!'

'ಚುರ್ಕು ಮೆಣಸಿನಕಾಯಿ ಅಲ್ರೀ... ಭೂಚಕ್ರ...! ವಿಚಿತ್ರವಾದ ಅತಿಯಾದ ಚಟುವಟಿಕೇಲಿ ಸುತ್ತಾಡುತ್ತೆ. ಎಲ್ಲ ಮಕ್ಕಳ ಹಾಗೆ ಸುಮ್ಮನೆ ಇರೋದೇ ಇಲ್ಲ... ವಿಚಿತ್ರವಾದ ಮಗು...!'

ಗಂಗೆಗೆ ಅವರ ದೂರು ಕೇಳಿ ಬಂದಿತಾದರೂ ಅವಳೇನೂ ಮಾಡುವ ಹಾಗಿರದೆ, ಬಾಯಿ ಮುಚ್ಚಿಕೊಂಡು ನೋವು ನುಂಗಿದಳು.

ಗಂಗೆಯ ಮುದ್ದಿನ ಪಾಪು ನಡೆಯಲು ಬಂದ ಮೇಲೆ ಒಂದು ಕ್ಷಣ ಒಂದು ಕಡೆ ನಿಲ್ಲುತ್ತಿರಲಿಲ್ಲ. ಗಂಗೆಯನ್ನು ಬುಗುರಿಯಂತೆ ತಿರುಗಿಸಿ ಬಿಡುತ್ತಿದ್ದಳು. ಈಗ ಕ್ಷಣ ಇಲ್ಲಿದ್ದರೆ ಇನ್ನೊಂದು ಕ್ಷಣ ಅದೆಲ್ಲೋ ಓಡಿ ಬಿಡುತ್ತಿತ್ತು. ಹಿಡಿಯುವುದೇ ಕಷ್ಟವಾಗುತ್ತಿತ್ತು. ಗಂಗೆ ಪಾತ್ರೆ ತೊಳೆಯುತ್ತಿದ್ದರೆ ಪಾಪು ಗರ್ಭಗುಡಿ ಒಳಗೆ ಓಡಿ ನುಗ್ಗಿಬಿಡುತ್ತಿದ್ದಳು. ಮೈಲಿಗೆಯಾಯಿತೆಂದು ಸುತ್ತಲ ಎಲ್ಲರಿಂದ ಬಯ್ಗಳು ಕೊಳ್ಳುತ್ತಿತ್ತು. ತಾಯಿ ದೇವಸ್ಥಾನದ ಹೊರಗೆ ರಂಗೋಲೆ ಇಡುತ್ತಿದ್ದರೆ ಇವಳು ಬೀದಿಗೋಡಿಬಿಡುತ್ತಿದ್ದಳು. ಚಪ್ಪಲಿ ರಾಶಿ ಇದ್ದರೆ ಅಲ್ಲಿ ಹೋಗಿ ಚಪ್ಪಲಿ ತೆಗೆದು ಕೊಂಡು ಕಚ್ಚಿ ಕಚ್ಚಿ ಹಾಕುತ್ತಿದ್ದಳು. ಹೀಗೆ ತನಗೆ ಮನಸ್ಸಿಗೆ ಬಂದುದನ್ನು ಕಣ್ಣು ಮುಚ್ಚಿಬಿಡುವುದರಲ್ಲಿ ಮಾಡಿಯೇ ತೀರುತ್ತಿದ್ದಳು. ತಡೆದರೆ, ಹೊಡೆದರೆ ವಿಕಾರವಾಗಿ ಪ್ರತಿಭಟಿಸುತ್ತಿದ್ದಳು.

ಗಂಗೆ ಬಲು ತಾಳ್ಮೆಯಿಂದ ಹೇಗೋ ಆ ಮಗುವನ್ನು ಸಂಭಾಳಿಸುತ್ತಿದ್ದಳು. ಆದರೆ ಯಾರಾದರು ಬೇರೆಯವರು ಬೆಟ್ಟುಮಾಡಿ ಕೂಸನ್ನು ದೂಷಿಸಿದರೆ ಗಂಗೆಗೆ ಸಿಟ್ಟು ಬರುತ್ತಿತ್ತು. ಮಗುವನ್ನು ಬಿಟ್ಟುಕೊಡುತ್ತಿರಲಿಲ್ಲ. ಗಂಗೆಗೆ ಆ ಮಗುವಿನ ವಿಚಿತ್ರ ಸ್ವಭಾವ ಅರಿವಿತ್ತು. ಪಾಪು ಮಕ್ಕಳ ಜೊತೆ ಆಡುವುದನ್ನು ಕಲಿಯಲಿ ಎಂದು ಮಕ್ಕಳ ಗುಂಪಿಗೆ ಬಿಟ್ಟರೆ ಕೆಲವೊಮ್ಮೆ ಮನಸ್ಸಿದ್ದರೆ ಚೆನ್ನಾಗಿ ಆಡುವಳು ಇಲ್ಲದಿದ್ದರೆ ಯಾರನ್ನಾದರೂ ತಳ್ಳಿಬಿಡುವಳು ಇಲ್ಲವೇ ಹೊಡೆಯಲು ಹೋಗುವಳು. ಆಗೆಲ್ಲ ಕೂಸಿನ ಕಣ್ಣು ಚುರುಕು ಚಿಮ್ಮಿಸುವುದುಂಟು. ದುಂಡು ದುಂಡಾಗಿದ್ದು, ಗುಲಾಬಿ ಬಣ್ಣದ ಪಾಪುವಿಗೆ ಗುಂಗುರು ಕೇಶವೂ ಇದ್ದು ಸಿಲುಲಾಯಿಡ್ ಗೊಂಬೆಯಂತಿದ್ದಳು. ಗಂಗೆ, ತನ್ನ ಸೀರೆ ಹರಿದಿದೆಯೊ ಬಿಟ್ಟಿದೆಯೊ ಗಣನೆಗೆ ತೆಗೆದುಕೊಳ್ಳದೆ, ಕೂಸಿಗೆ ಮಾತ್ರಾ ತಾನೇ ಕೈಯಾರ ಬಟ್ಟೆ ಹೊಲೆದು ಅದರ ಮೇಲೆ ಕಸೂತಿ ಮಾಡಿ ಆನಂದಿಸುತ್ತಿದ್ದಳು. ಹೊಟ್ಟೆಕಿಚ್ಚಿನಿಂದ ಮಗುವಿನ 'ಇರಸರಿಕೆ'ಯನ್ನು ಅರ್ಥವಿಲ್ಲದೆ ದೂಷಿಸ



## ಇಲ್ಲಿಯವರೆಗೆ

ಗಂಗಾ ಬಳಿ ಬಂದ ಪ್ರಸಾದ 'ಮಗುವಿನ ತಂದೆ ಯಾರು ಎಂದು ಹೇಳು; ಎಷ್ಟು ದಿನಾಂತ ನಿಜಸ್ಥಿತಿ ಮುಚ್ಚಿಡಲು ಸಾಧ್ಯ?' ಎಂದು ಕೇಳುತ್ತಾನೆ. ಆಗ ದೇವಸ್ಥಾನ ಸಮಿತಿ ಅಧ್ಯಕ್ಷೆ ಸುನಂದ ಆಕೆಯ ಉತ್ತರಕ್ಕಾಗಿ ಕಿವಿಗೊಟ್ಟು ಆಲಿಸುತ್ತಾರೆ. ಆದರೆ ಗಂಗಾ ನೀಡಿದ ಉತ್ತರ 'ನನ್ನ ಕ್ಷಮ್ಸಿ, ತೆಪ್ಪು ಎಲ್ಲ ಹೊಟ್ಟೆಯೊಳಕ್ಕೆ ಹಾಕ್ಕೊಳ್ಳಿ' ಎಂದಿರುತ್ತದೆ. ಇದಾಗಿ ಸ್ವಲ್ಪ ದಿನಕ್ಕೆ ಮಗುವಿಗೆ ವಿಪರೀತ ಜ್ವರ ಬರುತ್ತದೆ. ಮಗುವಿನ ತಪಾಸಣೆಗಾಗಿ ಶೀನಣ್ಣನೇ ವೈದ್ಯರನ್ನು ಶೆಡ್‌ಗೆ ಕರೆ ತರುತ್ತಾನೆ. ನಾಟಿ ವೈದ್ಯರು ಮಗುವನ್ನು ಪರೀಕ್ಷೆ ಮಾಡುತ್ತಾರೆ. ವೈದ್ಯರನ್ನು ಕಂಡ ಗಂಗಾ ದೆವ್ವ ಕಂಡಂತೆ ಬೆದರುತ್ತಾಳೆ. ಹುಬ್ಬಳ್ಳಿಯಿಂದ ಬಂದ ಶಿವಣ್ಣ ನಾಟಿವೈದ್ಯನಂತೆ ಬಂದಿದ್ದು ತನ್ನ ಗಂಡ ಎಂದು ಗಂಗಾಗೆ ಗೊತ್ತಿತ್ತು. ಗಂಡ ಇವನೇ ಎಂದು ಎಲ್ಲರಿಗೂ ತಿಳಿಯೋ ಮುಂಚೆ ಹೊರಡು ಎನ್ನುತ್ತಾಳೆ. ಗಂಗಾಳನ್ನು ಕರೆದೊಯ್ಯಲೆಂದೇ ಬಂದ ಶಿವಣ್ಣನಿಗೆ ಕಸಿವಿಸಿಯಾಗುತ್ತದೆ.

ಬಹುದಾಗಿತ್ತೇ ಹೊರತು ಅವಳ ಕೂಸು ಚೆನ್ನಾಗಿ ಬಟ್ಟೆ ಹಾಕಿಕೊಂಡು, ಕೇಶರಾಶಿಯನ್ನು ಎಣ್ಣೆಯಲ್ಲಿ ಮಿಂಚಿಸಿ ಎರಡು ಜಡೆ ಹೆಣೆಸಿಕೊಂಡು ಅಚ್ಚುಕಟ್ಟಿನಲ್ಲಿ ಇರುತ್ತಿತ್ತು.

ಚೆನ್ನಾಗಿ ಅಲಂಕಾರ ಮಾಡಿಸಿಕೊಂಡ ಅವಳ ಕರುಳ ಕುಡಿ ತನ್ನ ವಿಚಿತ್ರ ನಡವಳಿಕೆಯಿಂದ ತಾಯಿಯ ಕಣ್ಣಲ್ಲಿ ನೀರು ಬರಿಸಿಬಿಡುತ್ತಿತ್ತು. 'ಇವಳಿಗೇನಾಗಿದೆ...?' ದೆವ್ವದ ಕಾಟವೇನಾದರೂ ಕಾಡುತ್ತಿದೆಯೆ? ಎಂದು ಆ ತಾಯಿ ಕಳವಳಪಟ್ಟುಕೊಳ್ಳುತ್ತಿದ್ದಳು. ತನ್ನ ಗ್ರಾಮದಲ್ಲಾಗಿದ್ದರೆ ಮಾಂತ್ರಿಕನಿಂದ ಯಂತ್ರ ಕಟ್ಟಿಸಬಹುದಾಗಿತ್ತು. ಇಲ್ಲಿ ಯಾರ ನೆರವು ಪಡೆಯಲಿ? ಎಂದು ಚಿಂತಿತಳಾಗುತ್ತಿದ್ದಳು. ಅವಳ ಹಳ್ಳಿ ಮಾಂತ್ರಿಕ ಹೀಗೆ ವಿಚಿತ್ರವಾಗಿ ಆಡುವರಿಗೆ ದೆವ್ವ ಬಿಡಿಸಲು ಬೇವಿನಸೊಪ್ಪಿನ ಏಟು, ಮೆಣಸಿನಕಾಯಿ ಘಾಟು ಹಿಡಿಸಿ ಸರಿಪಡಿಸುವುದನ್ನು ಅವಳು ನೋಡಿದ್ದಳು. ಒಂದೊಂದು ಸಾರಿ ಪಾಪು ಚಂಡಿ ಹಠ ಹಿಡಿದಾಗ ಅವಳಿಗೆ ದೆವ್ವ ಮೆಟ್ಟಿಕೊಂಡಿದೆ ಅನಿಸುತ್ತಿತ್ತು. ಕೊನೆಯ ಪಕ್ಷ, ಕೂಸಿಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಒಂದು ಯಂತ್ರ ಕಟ್ಟಿಸಿಕೊಂಡು ಬರಬೇಕು ಎಂದುಕೊಂಡಳು. ಮೈಸೂರ ಜನ ಕೋಟೆ ಆಂಜನೇಯನಲ್ಲಿ ಇಟ್ಟುಕೊಂಡಿದ್ದ ಈ ನಂಬಿಕೆ ಅವಳನ್ನು ಒಂದು ಶನಿವಾರ ಬಸ್ಸಿನಲ್ಲಿ ಹೋಗಿ ಯಂತ್ರ ಕಟ್ಟಿಸಿಕೊಂಡು ಬರುವಂತೆ ಮಾಡಿತು. ನಂತರ ಮಗು ಹೇಗಾದರೂ ಇರಲಿ, ಯಂತ್ರ ಈಗ ಗಂಗೆಗೇ ಒಂದು ಸಮಾಧಾನ ತಂದಿತ್ತು!

ಅವಳ ಪಾಪು ಎಷ್ಟು ಬೇಗ ಬೇಗ ಬೆಳೆಯುತ್ತಿದ್ದಳೆಂದರೆ ಅದು ಗಂಗೆಯನ್ನು ಅಚ್ಚರಿಗೊಳಿಸಿತು. ಸಾಧಾರಣವಾಗಿ ದೇಹದ ಬೆಳವಣಿಗೆ ಜೊತೆಗೆ ಮಾನಸಿಕ ಬೆಳವಣಿಗೆಯೂ ಆಗುತ್ತದೆಯೇ? ಸಮಾಜದಲ್ಲಿ ಹಿಂದಾಣಿಕೆ ಮಾಡಿಕೊಳ್ಳುವ ಕಲಿಕೆ ವಿಸ್ತರಿಸುವ ಕಾಲ. ಆದರೆ ಪಾಪು ಹುಟ್ಟಿದಂದಿನಿಂದ ಎಲ್ಲ ಮಕ್ಕಳಂತೆ ತನಗೂ ಒಂದು ತಂದೆ ಇಲ್ಲ ಎಂಬುದರ ಜೊತೆಗೆ, ಯಾರೂ ತನ್ನನ್ನ ಯಾವುದೇ ಬೇಡದ ವಸ್ತು ಕಂಡಂತೆ ಕಾಣುತ್ತಿರುವುದು ಅನುಭವಿಸುತ್ತಲೇ ದೊಡ್ಡವಳಾಗಿ ಬೆಳೆಯತೊಡಗಿದಳು. ಕೂಸಿಗೆ ತಂದೆ, ತಾತ, ಅಜ್ಜಿ, ಚಿಕ್ಕಮ್ಮ, ದೊಡ್ಡಮ್ಮ, ಸೋದರತ್ತೆ ಯಾರೊಬ್ಬರ ಪ್ರೇಮದ ಆರೈಕೆಯೂ ಇರಲಿಲ್ಲ. ಪಾಪುಗೆ ತಾಯಿ ಒಬ್ಬಳದೇ ಪ್ರೀತಿ. ಅವಳು ಬೆಳೆಯುತ್ತಾ ಹೋದಂತೆ ಮುಗ್ಧತೆಯಲ್ಲಿ ಅವಳೊಂದಿಗೆ ಆಟವಾಡಲು